# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದವಾರ್ಡ್– ಸಂಖ್ಯೆ 160ರಲ್ಲಿ

## ದಿನಾಂಕ: 08.12.2020 ರಂದು, ನಡೆದ ವಾರ್ಡ್ ಕಮಿಟಿ ಸಭೆಯ ಸಭಾ ನಡವಳಿಗಳು

ದಿನಾಂಕ:08.12.2020 ರಂದು ವಾರ್ಡ್ ಸಂಖ್ಯೆ 160ರ ಡಿಸೆಂಬರ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್‌ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

- ವಾರ್ಡ್ ಸಂಖ್ಯೆ–160ರ ನೋಡಲ್ ಅಧಿಕಾರಿಗಳು ಮುಂದಿನ ಸಭೆಯನ್ನು ಮಧ್ಯಾಹ್ನ 3:00 ಗಂಟೆಗೆ ಆಯೋಜಿಸಿದಲ್ಲಿ ಸಭೆ ಮುಗಿದ ನಂತರ ಆದ್ಯತೆಯ ಮೇರೆಗೆ ಸಭೆಯಲ್ಲಿ ದಾಖಲಾಗುವ ದೂರುಗಳ ಸ್ಥಳ ಪರಿಶೀಲಿಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದೆಂದು ತಿಳಿಸಿದರು ಮತ್ತು ಸಭೆಗೆ ಗೈರು ಹಾಜರಾಗುವ & ತಡವಾಗಿ ಆಗಮಿಸುವ ಅಧಿಕಾರಿಗಳ ಮೇಲೆ, ಇದೇ ರೀತಿ ಮುಂದುವರೆದರೆ ಶಿಸ್ತು ಕ್ರಮ ಜರುಗಿಸಲು ಮೇಲಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದೆಂದು, ಸಭೆಗೆ ಗೈರಾಗಿದ್ದ ಹಾಗೂ ತಡವಾಗಿ ಆಗಮಿಸಿದ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡಿದರು.

## ❖ ಘನತ್ಯಾಜ್ಯನಿರ್ವಹಣೆಗೆಸಂಬಂಧಿಸಿದವಿಷಯಗಳು

- ಈ ಹಿಂದೆಯೇ ಬ್ಲಾಕ್ ಸ್ಪಾಟ್‌ಗಳ ಪಟ್ಟಿ ನೀಡುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದ್ದರೂ ಪಟ್ಟಿ ನೀಡಿರುವುದಿಲ್ಲವೆಂದು ತಿಳಿಸಿ ನಾಳೆಯೊಳಗೆ ವಾಟ್ಸಾಪ್ ಮುಖಾಂತರ ಪಟ್ಟಿ ಕಳುಹಿಸಲು ನೋಡಲ್ ಅಧಿಕಾರಿಗಳು ಸೂಚಿಸಿದರು.
- ಪ್ಲಾಸ್ಟಿಕ್ ಬಳಕೆಗೆ ನಿರ್ಬಂಧವಿದ್ದರೂ ಹಲವು ಕಡೆ ಬಳಕೆಯಾಗುತ್ತಿರುವುದು ಕಂಡು ಬಂದಿದ್ದು, ಸೂಕ್ತ ಕ್ರಮ ವಹಿಸುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು.
- ಸಪ್ತಗಿರಿ ಬಡಾವಣೆ ನಿವಾಸಿಯಾದ ಶ್ರೀಮತಿ ಪ್ರತಿಮಾ ರಾವ್ ರವರು ಸಪ್ತಗಿರಿ ಬಡಾವಣೆಯ ಖಾಲಿ ನಿವೇಶನಗಳಲ್ಲಿ ಗಿಡ–ಗಂಟೆಗಳು ಬೆಳೆದಿದ್ದು ಸ್ವಚ್ಛಗೊಳಿಸಲು ಪೌರ ಕಾರ್ಮಿಕರು ಬರುತ್ತಿಲ್ಲವೆಂದು ದೂರು ನೀಡಿದರು ಇದಕ್ಕೆ ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿಗಳು ಸದರಿ ಪ್ರದೇಶಗಳ ಸ್ಥಳ ಪರಿಶೀಲಿಸಿ ಕ್ರಮ ವಹಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗುವುದೆಂದು ತಿಳಿಸಿದರು.

- ಪೌರ ಕಾರ್ಮಿಕರ ನೇಮಕಾತಿ ಬಗ್ಗೆ ಹಾಗೂ ಬ್ಲಾಕ್ ಸ್ಪಾಟ್ ತೆರವುಗೊಳಿಸಲು ಹಿಂದಿನ ಸಭೆಯಲ್ಲಿಯೇ ತಿಳಿಸಿದ್ದರೂ ಯಾವುದೇ ಕ್ರಮ ವಹಿಸಿರುವುದಿಲ್ಲವೆಂದು ತಿಳಿಸಿ ಮುಂದಿನ ಸಭೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾನಿ) ರವರು ತಪ್ಪದೇ ವರದಿಯೊಂದಿಗೆ ಹಾಜರಾಗಲು ತಿಳಿಸಲಾಯಿತು.
- ಕಸ ನಿರ್ವಹಣೆಯ ಗುತ್ತಿಗೆದಾರರು ಮತ್ತು ಸೂಪರ್‌ವೈಸರ್‌ಗಳು ತ್ತದೇ ಮುಂದಿನ ಸಭೆಯಲ್ಲಿ ಹಾಜರಾಗಲು ತಿಳಿಸುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.
- ಬ್ಲಾಕ್ ಸ್ಪಾಟ್ ತೆರವುಗೊಳಿಸಿದ ನಂತರ ಸಿಸಿಟಿವಿ ಕ್ಯಾಮೆರಾ ಅಳವಡಿಸಲು ಪಾಂಡುರಂಗರವರು ಕೋರಿದರು ಇಲ್ಲವಾದಲ್ಲಿ ಮತ್ತೆ ಕಸ ತಂದು ಸುರಿಯುವುದಾಗಿ ತಿಳಿಸದರು.
- ಬೀದಿ ಬದಿ ವ್ಯಾಪಾರಿಗಳು ಪ್ಲಾಸ್ಟಿಕ್ ಉಪಯೋಗಿಸುವುದಿಲ್ಲವೆಂದು ನಾಮಫಲಕ ಅಳವಡಿಸಲು Street vendor Committee ಗೆ ತಿಳಿಸಲು ಸೂಚಿಸಿದರು.

## ❖ ಪೊಲೀಸ್ ಇಲಾಖೆಗೆ ಸಂಬಂಧಿಸಿದ ವಿಷಯಗಳು

- 1ನೇ ಅಡ್ಡರಸ್ತೆ ಐಡಿಯಲ್ ಹೋಮ್ಸ್, ಎಸ್‌ಬಿಐ ಬ್ಯಾಂಕ್ ಎದುರು "ಹೋಟೆಲ್ 1522" ಇಲ್ಲಿ ರಾತ್ರಿ 12:00 ರಿಂದ 1:00 ಗಂಟೆಯ ಸಮಯದಲ್ಲಿ ಮದ್ಯಪಾನ ಮಾಡಿ ಗಲಾಟೆ ಮಾಡುತ್ತಿದ್ದು, ಈ ಬಗ್ಗೆ ವಿಚಾರಿಸಿದರೆ ನಮ್ಮ ಮೇಲೆ ಜಗಳಕ್ಕೆ ಬರುತ್ತಾರೆಂದು ಐಡಿಯಲ್ ಹೋಮ್ಸ್ ನಿವಾಸಿಯಾದ ಪಾಂಡುರಂಗರವರು ದೂರು ನೀಡಿ ಕ್ರಮ ವಹಿಸುವಂತೆ ಕೋರಿದರು.
- ಹಿಂದಿನ ಸಭೆಯಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ಬೀಟ್ ಪುಸ್ತಕ ಅಳವಡಿಸಲು ಕೋರಲಾಗಿದ್ದರೂ, ಇದುವರೆಗೂ ಕಾರ್ಯರೂಪಕ್ಕೆ ಬಂದಿರುವುದಿಲ್ಲವೆಂದು ಸಾರ್ವಜನಿಕರು ದೂರಿದರು.

## ❖ ಬಿ.ಡಬ್ಲ್ಯೂ.ಎಸ್.ಎಸ್.ಬಿ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು

- ಕಳೆದ ಸಭೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಹೆಚ್ಚಿನ ಬಿಲ್ ಮೊತ್ತವನ್ನು ವಸೂಲಿ ಮಾಡಲಾಗುತ್ತಿರುವ ಬಗ್ಗೆ ಹಾಗೂ ಮನೆಗಳಲ್ಲಿ ಒಳಚರಂಡಿ ಸಂಪರ್ಕ ಬ್ಲಾಕ್ ಆದಲ್ಲಿ ಯಾರ ಬಳಿ ಸರಿಪಡಿಸಬೇಕೆಂದು ಗೊಂದಲವಿದ್ದು ಈ ಬಗ್ಗೆ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ತೆಗೆದುಕೊಳ್ಳಲಾಗಿರುವ ಕ್ರಮದ ಬಗ್ಗೆ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರನ್ನು ಪ್ರಶ್ನಿಸಲಾಗಿ ಉತ್ತರಿಸಿದ ಸಹಾಯಕ ಅಭಿಯಂತರರು ರಸ್ತೆ ಬದಿ ಒಳ ಚರಂಡಿ ಬ್ಲಾಕ್ ಆದಲ್ಲಿ ಬಿ.ಡಬ್ಲೂ.ಎಸ್.ಎಸ್.ಬಿ ವತಿಯಿಂದಲೇ ಸ್ವಚ್ಛಗೊಳಿಸಲಾಗುತ್ತಿದ್ದು, ಮನೆಗೆ ಸಂಪರ್ಕ ಪಡೆದಿರುವ ಕೊಳವೆಗಳಲ್ಲಿ ಬ್ಲಾಕ್ ಆದಲ್ಲಿ ಹೆವಿ ಜೆಟ್ ಬಳಸಿ ಸ್ವಚ್ಛ ಮಾಡಿದಲ್ಲಿ ಪಿವಿಸಿ ಪೈಪ್ ಹೊಡೆದುಹೋಗುವ ಸಂಭವವಿರುವದರಿಂದ ಮನೆಗಳ ಸಂಪರ್ಕಗಳನ್ನು ಸ್ವಚ್ಛಗೊಳಿಸಲಾಗುತ್ತಿಲ್ಲವೆಂದು ತಿಳಿಸಿದರು ಹಾಗೂ ಇದಕ್ಕೆ ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿಗಳು ಜಲಮಂಡಳಿಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಮನೆಗಳ ಸಂಪರ್ಕ ಕೊಳವೆಗಳನ್ನು ಸ್ವಚ್ಛಗೊಳಿಸಲು ಸೂಕ್ತ ಧರ ನಿಗಧಿಪಡಿಸಿ ಪರ್ಯಾಯ ವ್ಯವಸ್ಥೆ ಕಲ್ಪಿಸುವಂತೆ ಜಲಮಂಡಳಿಯ ಸಹಾಯಕ ಅಭಿಯಂತರರಿಗೆ ಸೂಚಿಸಿದರು.

## ❖ ವಿದ್ಯುತ್ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು

- ಬೀದಿ ದೀಪಗಳು ಸರಿಯಾದ ಸಮಯಕ್ಕೆ ON-OFF ಮಾಡಲು ಸ್ವಿಚ್ ಬೋರ್ಡ್ ಅಳವಡಿಸಲು ಈ ಹಿಂದಿನ ಸಭೆಯಲ್ಲೇ ತಿಳಿಸಿಲಾಗಿದ್ದು ಈ ಬಗ್ಗೆ ಯಾವ ಕ್ರಮ ಜರುಗಿಸಲಾಗಿದೆಯೆಂದು ಪ್ರಶ್ನಿಸಲಾಗಿ ಕಾರ್ಯಪಾಲಕ ಅಭಿಯಂತರರು(ವಿದ್ಯುತ್) ರವರು ಉತ್ತರಿಸುತ್ತಾ ಸ್ವಿಚ್ ಬೋರ್ಡ್ ಅಳವಡಿಸುವ ಬಗ್ಗೆ Global survey ನಡೆಯುತ್ತಿದ್ದು ಈ ಬಗ್ಗೆ ಈಗಾಗಲೇ ಕ್ರಿಯಾಯೋಜನೆ ಸಲ್ಲಿಸಲಾಗಿರುತ್ತದೆ. ಏಪ್ರಿಲ್–2021ರೊಳಗೆ ಕಾರ್ಯರೂಪಕ್ಕೆ ತರಲಾಗುವುದೆಂದು ತಿಳಿಸಿದರು.
- ಕೊಕ್ಕೆಯಿರುವ ಸ್ವಿಚ್ ಬೋರ್ಡ್‌ಗಳ ಪಟ್ಟಿ ನೀಡಿದಲ್ಲಿ ಬೆಸ್ಕಾಂ ವತಿಯಿಂದ ಮೀಟರ್ ಬಾಕ್ಸ್ ಅಳವಡಿಸಲು ಅಗತ್ಯ ಕ್ರಮವಹಿಸುವುದಾಗಿ ಬೆಸ್ಕಾಂ ಕಿರಿಯ ಅಭಿಯಂತರರು ತಿಳಿಸಿದರು.

## ❖ ಬೆಸ್ಕಾಂ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು

- ಭೂಗತ ಕೇಬಲ್ ಅಳವಡಿಸಲು ರಸ್ತೆ ಅಗೆಯುತ್ತಿದ್ದು, ಕಾಮಗಾರಿ ಮುಗಿದ ನಂತರ ರಸ್ತೆಯನ್ನು ಸೂಕ್ತ ರೀತಿಯಲ್ಲಿ ಬಿಬಿಎಂಪಿಯ SOP ಯಂತೆ ಮರುಪೂರಣಗೊಳಿಸಲು ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಯಿತು.

## ❖ ಕಾಮಗಾರಿ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು

- ಟ್ರ್ಯಾಕ್ಟರ್ ಮತ್ತು ಜೆಸಿಬಿ ಮೂಲಕ ವಾರ್ಡ್ ವ್ಯಾಪ್ತಿಯಲ್ಲಿನ ಡೆಬ್ರಿಸ್‌ಗಳನ್ನು ತೆರವುಗೊಳಿಸಿ ಸದರಿ ಡೆಬ್ರಿಸ್ ಗಳನ್ನು ಒಂದು ಸ್ಥಳದಲ್ಲಿ ಸಂಗ್ರಹಿಸಿ ಅದರಲ್ಲಿನ ವಿವಿಧ ತ್ಯಾಜ್ಯಗಳನ್ನು ಬೇರ್ಪಡಿಸಿ ತದನಂತರ ವಿಲೇವಾರಿ ಮಾಡಲು ಸೂಚಿಸಲಾಯಿತು. ಹಾಗೂ ಇದಕ್ಕೆ ತಗುಲಬಹುದಾದ ವೆಚ್ಚವನ್ನು ಡಿ.ಸಿ ಬಿಲ್ ಮುಖಾಂತರ ಪಾವತಿಸಲು ಜಂಟಿ ಆಯುಕ್ತರು, ರಾರಾನಗರ ವಲಯ ರವರಿಗೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ವಾರ್ಡ್ ಅಭಿಯಂತರರರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
- ತುರ್ತಾಗಿ ರಸ್ತೆಗುಂಡಿಗಳನ್ನು ಮುಚ್ಚಲು ಕ್ರಮವಹಿಸುವಂತೆ ಪಾಂಡುರಂಗರವರು ಕೋರಿದರು ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರು ಈಗಾಗಲೇ ಬಿಬಿಎಂಪಿ ವತಿಯಿಂದ ಪ್ರಾರಂಭಿಸಲಾಗಿರುವ ಡಾಂಬರು ಮಿಶ್ರಣವನ್ನು ಪಡೆದು ಪ್ರಮುಖ ವಾರ್ಡ್ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಲಾಗುತ್ತಿದ್ದು, ಡಾಂಬರು ಮಿಶ್ರಣದ ಲಭ್ಯತೆಗನುಗುಣವಾಗಿ ಆದ್ಯತೆಯ ಮೇರೆಗೆ ರಸ್ತೆಗುಂಡಿಗಳನ್ನು ಮುಚ್ಚಲು ಕ್ರಮವಹಿಸಲಾಗುವುದೆಂದು ತಿಳಿಸಿದರು.
- ಶ್ರೀಮತಿ.ಪ್ರತಿಮಾ ರವರು ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ, ಸಪ್ತಗಿರಿ ಬಡಾವಣೆಯಲ್ಲಿ ನಾಮಫಲಕಗಳನ್ನು ಅಳವಡಿಸಬೇಕಾಗಿರುವ ರಸ್ತೆಗಳ ಪಟ್ಟಿಯನ್ನು ನೀಡಿದರು.
- Silt & Tractor ಕಾಮಗಾರಿಯ ಕಾರ್ಯಾದೇಶವನ್ನು ತುರ್ತಾಗಿ ಪಡೆದು ಕಾಮಗಾರಿಯನ್ನು ಪ್ರಾರಂಭಿಸಲು ಸೂಚಿಸಿದರು.
- ವಾರ್ಡ್‌ನ ಕಂದಾಯ ನಿರೀಕ್ಷಕರು ಹಾಗೂ ಕರಪರಿವೀಕ್ಷಕರು ವಾರ್ಡ್ ವ್ಯಾಪ್ತಿಯಲ್ಲಿನ ಖಾಲಿ ನಿವೇಶನಗಳ ಬಗ್ಗೆ ಮಾಹಿತಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಲು ತಿಳಿಸುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು.

❖ **<u>ಅರಣ್ಯ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು</u>**

➢ ಇಂಡಿಯನ್ ಬ್ಯಾಂಕ್ ಕಾಲೋನಿನಿವಾಸಿಯೋರ್ವರು ಕಳೆದ 5 ವರ್ಷಗಳಿಂದ ನೀರಿನ ಸಂಪ್‌ನಲ್ಲಿ ಬೇರು ಬೆಳೆದಿರುವ ಮರವನ್ನು ಕತ್ತರಿಸಲು ಮನವಿ ಸಲ್ಲಿಸುತ್ತಿದ್ದರೂ ಯಾವುದೇ ಪ್ರಯೋಜವಾಗಿರುವುದಿಲ್ಲವೆಂದು ದೂರಿದರು.

ಸದಸ್ಯ ಕಾರ್ಯದರ್ಶಿಗಳು ವಾರ್ಡ್ ಸಮಿತಿ

ವಾರ್ಡ್ ಸಂಖ್ಯೆ–160.

***<u>ಪ್ರತಿಯನ್ನು:-</u>***

1. ನೋಡಲ್ ಅಧಿಕಾರಿಗಳು, ವಾರ್ಡ್–160.
2. ಜಂಟಿ ಆಯುಕ್ತರು, ರಾರಾನಗರ ವಲಯ.
3. ಮುಖ್ಯ ಅಭಿಯಂತರರು, ರಾರಾನಗರ ವಲಯ.
4. ಕಾರ್ಯಪಾಲಕ ಅಭಿಯಂತರರು, ರಾರಾನಗರ ವಿಭಾಗ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.